ನೀಡಿದರು. ನಟರು, ನಿರ್ದೇಶಕರು, ಪತ್ರಕರ್ತರು ಎಲ್ಲರೂ ತುಂಬ ಚೆನ್ನಾಗಿ ನಟಿಸಿದ್ದೀರಿ ಎಂದರು. ನನಗೆ ಆವಾಗ 'ಹೌದಾ, ನಾನು ಅಷ್ಟೊಂದು ಚೆನ್ನಾಗಿ ಮಾಡಿದ್ದೀನಾ?' ಎಂದೇ ಅನಿಸಿತು. ಆ ಸಿನಿಮಾಗೆ ಪ್ರಶಸ್ತಿಯೂ ಬಂತು. ಆದರೆ ನನಗೆ ಈಗಲೂ ನಾನು ಆ ಸಿನಿಮಾದಲ್ಲಿ ತುಂಬ ವಿಶೇಷವಾಗಿ ನಟಿಸಿದ್ದೇನೆ ಎಂದು ಅನಿಸುವುದಿಲ್ಲ. ಇಷ್ಟೆಲ್ಲ ಹೊಗಳುವಂಥದ್ದು ಏನ್ ಮಾಡಿದೀನಪ್ಪಾ ಎಂದೇ ಅಚ್ಚರಿಯಾಗುತ್ತದೆ.

ಹೀಗೆ ಪಾತ್ರಗಳು ಯಶಸ್ವಿಯಾದರೆ ಅಂಥ ಪಾತ್ರಗಳಿಗೇ ಟ್ಯಾಗ್ ಆಗ್ಬಿಡುವಿ. ಇದು ನೂರಕ್ಕೆ ನೂರರಷ್ಟು ಸತ್ಯ. 'ಎದ್ದೇಳು ಮಂಜುನಾಥ' ಸಿನಿಮಾ ನಂತರ ನನಗೆ ಅಂಥವೇ ಸಿನಿಮಾ ಬರಲು ಶುರುವಾಯ್ತು. 'ಸುಗ್ರೀವ' ಸಿನಿಮಾದಲ್ಲಿಯೂ ಸಹಜ ನಟನೆಯೇ ಬೇಕಾಗಿತ್ತು. ಎಮೋಷನಲ್ ದೃಶ್ಯಗಳಲ್ಲಿ ಚೆನ್ನಾಗಿ ನಟಿಸುವ ನಟಿ ಬೇಕಾಗಿತ್ತು. ಹಾಗೆಯೇ ಅಂಥದ್ದೇ ಪಾತ್ರಗಳಿಗೆ ಟ್ಯಾಗ್ ಆದೆ.

ಆದರೆ ಇನ್ನೊಂದು ರೀತಿಯಲ್ಲಿ ಹಾಗೆ ಆಗಿದ್ದು ಒಳ್ಳೆಯದೇ ಆಯಿತು. ಯಾಕೆಂದರೆ ನನಗೆ ನಟಿಸಲು ತುಂಬ ಷರತ್ತುಗಳಿವೆ. ನಾನು ಇಂಥ ಪಾತ್ರಗಳನ್ನು ಮಾಡಲ್ಲ, ಇಂಥ ಕಾಸ್ಟ್ಯೂಮ್ ಹಾಕಲ್ಲ, ಇಂಥ ಸೀನ್‌ಗಳನ್ನು ಮಾಡಲ್ಲ ಅಂತೆಲ್ಲ ಸುಮಾರು ಷರತ್ತುಗಳಿವೆ. ಹಾಗಾಗಿ ಅದಿಲ್ಲದೇ ಪಾತ್ರಗಳನ್ನೇ ಆಯ್ಕೆ ಮಾಡಿಕೊಂಡು ಹೋದೆ. ಆ ಗ್ರಾಫ್ ಹಾಗೆಯೇ ಹೋಯಿತು.

◆ **ನಿಮಗೆ ಯಾವತ್ತಾದರೂ, ನಾನು ಕಮರ್ಷಿಯಲ್ ಸಿನಿಮಾಗಳಲ್ಲಿ, ಗ್ಲ್ಯಾಮರ್ ಪಾತ್ರಗಳನ್ನು ಮಾಡಿದ್ದರೆ ಹೆಚ್ಚು ಚಾಲ್ತಿಯಲ್ಲಿರುತ್ತಿದ್ದೆ ಎಂದು ಅನಿಸಿದೆಯೇ?**

ತೀರಾ ಕಮರ್ಷಿಯಲ್ ಸಿನಿಮಾಗಳನ್ನು ಮಾಡಲೇಬೇಕು ಎಂದು ನನಗೆ ಅನಿಸಿಲ್ಲ. ನಾನು ಯಾವ ಸಿನಿಮಾ ಮಾಡಿದ್ದರೂ ಜನರು ಅದನ್ನು ಮೆಚ್ಚಿಕೊಳ್ಳಬೇಕು ಎಂಬುದಷ್ಟೇ ನನ್ನ ಮನಸಲ್ಲಿರುವುದು. ನನಗೆ ತೀರಾ ಗ್ಲ್ಯಾಮರಸ್ ಆಗಿ ಕಾಣಿಸಿಕೊಳ್ಳಲು ಸಾಧ್ಯವಿಲ್ಲ. ನನಗೆ ಅದು ಕಂಫರ್ಟಬಲ್ ಅಲ್ಲ. ಸುಮಾರು ಅಂಥ ಸಿನಿಮಾಗಳಲ್ಲಿ ನಟಿಸುವ ಅವಕಾಶ ಬಂದಾಗ ನಾನು ಒಪ್ಪಿಕೊಂಡಿಲ್ಲ. ನನಗೆ ಆ ರೀತಿಯ ಪಾತ್ರಗಳಲ್ಲಿ ನಟಿಸುವುದು ಸಾಧ್ಯವಿಲ್ಲ ಎಂದಿದ್ದೇನೆ. ನನ್ನ ಮಿತಿಗಳು ನನಗೆ ಗೊತ್ತಿದೆ. ಹಾಗಿದ್ದಾಗ ಅಂಥ ಸಿನಿಮಾಗಳನ್ನು ಒಪ್ಪಿಕೊಳ್ಳದೇ ಇರುವುದೇ ಲೇಸಲ್ಲವೇ? ಕೆಲವರು ತಾವು ನಟಿಸುವ ಪಾತ್ರದ ಅಗತ್ಯಗಳು ಏನೇ ಇದ್ದರೂ ಅದನ್ನು ಪೂರೈಸಲು ಸಿದ್ಧರಿರುತ್ತಾರೆ. ಅದು ಅವರ ಕಂಫರ್ಟ್ ಲೆವೆಲ್. ಆದರೆ ನನಗೆ ಆ ಕಂಫರ್ಟ್ ಲೆವೆಲ್ ಇಲ್ಲ. ನನಗೆ ಸೀರೆ ಕಂಪರ್ಟ್ ಆಗುತ್ತದೆಯಾ? ಅದನ್ನೇ ಮಾಡುತ್ತೇನೆ ಎಂದು ಹೊರಟೆ. ಹಾಗಿದ್ದಾಗಲೂ ಜನರು ನನ್ನನ್ನು ಗುರ್ತಿಸಿದರು. ಅದೂ ನನ್ನ ಅಭಿನಯ ಪ್ರತಿಭೆಯ ಮೂಲಕ. ನಾನು ಬಯಸಿದ್ದೂ ಅದನ್ನೇ.

◆ **'ಕಿಲ್ಲಿಂಗ್ ವೀರಪ್ಪನ್', 'ರಮಾಬಾಯಿ', 'ಲಕ್ಷ್ಮೀಸ್ ಎನ್‌ಟಿಆರ್' ನಂಥ ಹಲವು ಸಿನಿಮಾಗಳಲ್ಲಿ ಜೀವಂತ ಪಾತ್ರಗಳನ್ನು ತೆರೆಯ ಮೇಲೆ ಅಭಿನಯಿಸಿದ್ದೀರಿ? ಆ ಅನುಭವ ಹೇಗಿತ್ತು?**

ನನ್ನ ಕೆರಿಯರಲ್ಲಿ ಎಷ್ಟೊಂದು ನಿಜಜೀವನದ ಪಾತ್ರಗಳಲ್ಲಿ ನಟಿಸಿದ್ದೇನಲ್ಲ ಎಂದು ಯೋಚಿಸಿದರೆ ಖುಷಿಯಾಗುತ್ತದೆ. ಇಂಥ ಪಾತ್ರಗಳನ್ನು ನಿರ್ವಹಿಸುವುದು ಸವಾಲಿನದ್ದು. ನಾನು ಕೆಟ್ಟದಾಗಿ ನಟಿಸಿದರೆ ಅವರು ನನ್ನನ್ನು ಪ್ರಶ್ನೆ ಮಾಡಬಹುದು.. ಇನ್ನು ಚರಿತ್ರೆಯ ಪಾತ್ರಗಳಂತೂ ಅವೊಂದು ಐಕಾನ್‌ಗಳಾಗಿರುತ್ತವೆ. ಬಿ.ಆರ್. ಅಂಬೇಡ್ಕರ್ ಹೆಂಡತಿ 'ರಮಾಬಾಯಿ' ಪಾತ್ರದಲ್ಲಿ ನಟಿಸುವುದು ಪ್ರತಿಷ್ಠೆಯ ವಿಷಯವೂ ಹೌದು. ಎಲ್ಲರೂ ಮಾಡುವುದು ಸಾಧ್ಯವಿಲ್ಲವಲ್ಲ. ಅಷ್ಟೇ ಜವಾಬ್ದಾರಿಯೂ ಇರುತ್ತದೆ.

◆ **ಇತ್ತೀಚೆಗೆ ನಟಿಸಿರುವ 'ಆ್ಯಕ್ಟ್ 1978' ಸಿನಿಮಾ ಬಗ್ಗೆ ಹೇಳಿ?**

ಇದೊಂದು ಮಹಿಳಾಪ್ರಧಾನ ಸಿನಿಮಾ. ಈ ಪಾತ್ರದ ಬಗ್ಗೆ ನನಗೆ ಹೆಮ್ಮೆ ಇದೆ. ಕಥೆ ಹೇಳಿದಾಗಲೇ ನಾನು ತುಂಬಾ ರೋಮಾಂಚಿತಳಾಗಿದ್ದೆ. ತಕ್ಷಣವೇ ನನಗೆ ಈ ಪಾತ್ರದಲ್ಲಿ ನಟಿಸಬೇಕು ಅನಿಸಿಬಿಟ್ಟಿತು. ಬೇರೆ ಯಾರಾದರೂ ಈ ಪಾತ್ರ ಮಾಡಿದ್ದರೆ ನಾನು ನಿಜಕ್ಕೂ ಮಿಸ್ ಮಾಡ್ಕೋತಿದ್ದೆ. ಮಂಸೋರೆ ತುಂಬ ಸಂವೇದನಾಶೀಲ ನಿರ್ದೇಶಕರು.

◆ **ಹೊಸ ಸಿನಿಮಾಗಳು?**

ಸದ್ಯಕ್ಕಿಲ್ಲ. ಇತ್ತೀಚೆಗಷ್ಟೇ ಮದುವೆಯಾಗಿದ್ದೀನಿ. ಹಾಗಾಗಿ ಸದ್ಯಕ್ಕೆ ನಟನೆಯಿಂದ ಬ್ರೇಕ್ ತೆಗೆದುಕೊಂಡಿದ್ದೀನಿ. ನಾನು ಮಾಡುವುದೇ ವರ್ಷಕ್ಕೆ ಒಂದೋ ಎರಡೋ ಸಿನಿಮಾಗಳು. ಮುಂದೆಯೂ ನನಗಿಷ್ಟವಾದ ಸಿನಿಮಾಗಳು ಸಿಕ್ಕಾಗ ನಟಿಸುತ್ತಿರುತ್ತೇನೆ.

ಚಿತ್ರ: ನವ್ಯಾ ಕಡಮೆ

# ಟಂಟಂ ಡುಂಡುಂ ಡಬ್ಬಿಂಗ್ ಬಂತು!

ಒಂದಾನೊಂದು ಕಾಲದಲ್ಲಿ ಡಬ್ಬಿಂಗ್ ಪರ ಮಾತಾಡುವುದು ಕನ್ನಡದ್ರೋಹ ಎಂದು ಪರಿಗಣಿಸಲಾಗುತ್ತಿತ್ತು. ಆದರೆ ಈಗ ಡಬ್ಬಿಂಗ್ ವಿರೋಧಿ ಹೋರಾಟ ಎನ್ನುವುದು ಅಜ್ಜಂದಿರು ಮೊಮ್ಮಕ್ಕಳನ್ನು ಕೂಡಿಸಿಕೊಂಡು ಹೇಳುವ ಕಾಗಕ್ಕ ಗುಬ್ಬಕ್ಕನ ಕಥೆಯಂತಾಗಿದೆ. 'ಡಬ್ಬಿಂಗ್ ಇದು ಕನ್ನಡಪರ' ಎನ್ನುವ ಘೋಷಣೆ ಮುಗಿಲು ಮುಟ್ಟಿ ಅದರ ಬಿಸಿಗೆ ಆಕಾಶದ ಮೋಡ ಕರಗಿ ದಶದಿಕ್ಕುಗಳಿಂದ ಅಸಂಖ್ಯ ಧಾರಾವಾಹಿಗಳು ಕಿರುತೆರೆ ವಾಹಿನಿ ಮೂಲಕ ಮನೆ ಮನೆಯೊಳಗೆ ಸುರಿಯಲಾರಂಭಿಸಿವೆ. ವಿಶ್ವದ ಸಕಲ ಶ್ರೇಷ್ಠ ಜ್ಞಾನ ಸಂಪತ್ತುಗಳು ಕರುನಾಡ ನೆಲದಲ್ಲಿ ಹರಿದು ಇಲ್ಲಿನ ಬೆಳೆ ಸಮೃದ್ಧವಾಗಿ ನಳನಳಿಸುವ ದಿನಗಳು ಕಣ್ಣಳತೆಯಷ್ಟು ದೂರದಲ್ಲಿವೆ.

ಕನ್ನಡದ ಮುಖ್ಯವಾಹಿನಿಗಳಲ್ಲಿ ನಾಗರಹಾವುಗಳೂ ಕೇರೆಹಾವುಗಳೂ ಕನ್ನಡದಲ್ಲಿ ಭುಸುಗುಟ್ಟುತ್ತಿವೆ. ಆದರೆ ಯಾಕೋ ತುಟಿಚಲನೆಗೂ ಭುಸುಗುಟ್ಟುವಿಕೆಗೂ ತಾಳಮೇಳವಿಲ್ಲದೆ ನಾಗರಹಾವಿಗೆ ತನ್ನ ಬಗ್ಗೆ ತನಗೇ ಅನುಮಾನ ಬಂದಂತಿದೆ. ಅಶೋಕನ ಯುದ್ಧೋನ್ಮಾದ, ಕೃಷ್ಣನ ಮಾಯಾಲೀಲೆ, ಎಲ್ಲವೂ ಒಂದಕ್ಕಿಂತ ಇನ್ನೊಂದು ನೋಡಿ ಕಣ್ತುಂಬಿಕೊಳ್ಳಬೇಕು. ಉತ್ತರದ ಅಶೋಕನ ಚರಿತ್ರೆಯನ್ನು ಕಣ್ಣಿಗೊತ್ತಿಕೊಂಡು ನೋಡಿ ರೋಮಾಂಚನಗೊಳ್ಳುವುದೇ ಅಲ್ಲವೇ ಕನ್ನಡ ಜಾಗೃತಗೊಳ್ಳುವ – ಜಾಗತಿಕಗೊಳ್ಳುವ ರೀತಿ?

ಇದೆಲ್ಲದರ ನಡುವೆ ಒಂದಿಷ್ಟು ಜನರು 'ಕಿರುತೆರೆ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಡಬ್ಬಿಂಗ್ ಧಾರಾವಾಹಿಗಳು ನೂರಾರು ಜನರ ಕೆಲಸ ಕಿತ್ತುಕೊಳ್ಳುತ್ತಿವೆ. ಜ್ಞಾನಪ್ರಸಾರದ ಕಾರ್ಯಕ್ರಮಗಳಿಗೆ ಮಾತ್ರ ಸೀಮಿತಗೊಳಿಸಬೇಕು' ಎಂದು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ವಿಶೇಷ ಏನೆಂದರೆ ಈ ಮನವಿ ಸಲ್ಲಿಕೆಯ ಚಿತ್ರದಲ್ಲಿರುವವರಲ್ಲಿ ಬಹುತೇಕರು ಹಿರಿಯ ಸಿನಿಮಾ ಕಲಾವಿದರು, ನಿರ್ದೇಶಕರು. ದತ್ತಣ್ಣ, ಶ್ರೀನಿವಾಸಮೂರ್ತಿ, ಗಿರೀಶ ಕಾಸರವಳ್ಳಿ, ಬಿ. ಸುರೇಶ, ಮುಖ್ಯಮಂತ್ರಿ ಚಂದ್ರು.. ಹೀಗೆ ಬಹುತೇಕರು ಸಿನಿಮಾದಲ್ಲಿಯೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಹಿರಿಯರು.

ಈ ಹಿರಿಯರ ಚಿತ್ರ, 'ಕನ್ನಡಪರವೆಂದರೆ ಅದು ಕನ್ನಡಿಗರಪರವೂ ಆಗಿರಬೇಕು, ಕನ್ನಡಿಗರ ಅನ್ನ ಕಿತ್ತುಕೊಳ್ಳುವುದೆಂದರೆ ಅದು ಕನ್ನಡ ವಿರೋಧದ ಕೆಲಸ' ಎಂಬ ವಿವೇಕಕ್ಕೆ ಮುಸುಕಿರುವ ವೃದ್ಧಾಪ್ಯದ ಚಿತ್ರದಂತೆಯೂ ಭಾಸವಾಗುತ್ತದೆ. ಕಿರುತೆರೆಯ ಮೂಲಕ ಜನಪ್ರಿಯತೆ, ಹಣ, ಅವಕಾಶ ಎಲ್ಲ ಪಡೆದುಕೊಂಡಿರುವ ಯುವ ಕಲಾವಿದರು, ತಂತ್ರಜ್ಞರು ದೊಡ್ಡ ದೊಡ್ಡ ನಿರ್ಮಾಣ ಸಂಸ್ಥೆಯವರೆಲ್ಲ ಬಾಯಿಗೆ ಮಾಸ್ಕ್ ಹಾಕಿಕೊಂಡು ಉಸಿರೆತ್ತದೆ ತೆಪ್ಪಗಿದ್ದಾರೆ. ಅವರ ಕುಣಿಸುವ ಸೂತ್ರದ ದಾರ ಯಾರ ಕೈಯಲ್ಲಿದೆಯೋ...

ಡಬ್ಬಿಂಗ್ ಪರ ಬ್ಯಾಟಿಂಗ್ ಮಾಡುತ್ತ ಕನ್ನಡದ ಪ್ರತಿಭಾವಂತ ಯುವ ನಿರ್ದೇಶಕರೊಬ್ಬರು 'ಸಾವಿರಾರು ವರ್ಷಗಳ ಇತಿಹಾಸವಿರುವ ಕನ್ನಡ, ಇವತ್ತು ಬರುತ್ತಿರುವ ಯಕಶ್ಚಿತ್ ಡಬ್ಬಿಂಗ್ ದಾಳಿಗೆ ನಾಶವಾಗುವುದಾದರೆ ಅಷ್ಟು ದುರ್ಬಲ ಭಾಷೆ ಉಳಿಯಬೇಕೆ?' ಎಂಬರ್ಥದ ಮಾತುಗಳನ್ನಾಡಿದ್ದರು. ಅವರ ಹಂಬಲ ಈಡೇರುವ ದಿನಗಳೂ ತುಂಬ ದೂರವೇನಿಲ್ಲ ಬಿಡಿ. ಆದರೆ ಅದೇ ನಿರ್ದೇಶಕರು ತಮ್ಮ 'ಕಲಾತ್ಮಕ' ಸಿನಿಮಾದ ಬಗ್ಗೆ ಯಾರೂ ಮಾತಾಡುತ್ತಿಲ್ಲ. ಪತ್ರಿಕೆಗಳಲ್ಲಿ ಬಿಗ್ ಬಜೆಟ್ ಸಿನಿಮಾಗಳ ಬಗ್ಗೆಯಷ್ಟೇ ಬರೆಯುತ್ತಾರೆ ಎಂದೆಲ್ಲ ಅಲವತ್ತುಕೊಂಡಿರುವುದು ಮಾತ್ರ ತಮಾಷೆಯಾಗಿತ್ತು. ಭಾಷೆಯ ವಿಷಯದಲ್ಲಿ ತಳೆಯುವ ಕಠೋರ ನಿಲುವು ತಮ್ಮ ಕಾಲುಬುಡಕ್ಕೆ ಬಂದಾಗ ಅನ್ವಯಿಸಿಕೊಳ್ಳುವುದು ಕಷ್ಟವಲ್ಲವೇ?

ಬೆಕ್ಕನ್ನು ಸಾಕಿ ಬರೀ ಇಲಿ ತಿಂದುಕೊಂಡಿರು ಎಂದರೆ ಅದು ಕೇಳೀತೇ? ಇಲಿಗಿಂತ ಸುಲಭವಾಗಿ ಅದರ ಕಣ್ಣಿಗೆ ಬೀಳುವುದು ಮನೆಯ ಹಾಲು. ಅದನ್ನೇ ಅದು ಮೊದಲು ಕುಡಿಯುವುದು. ಈಗಂತೂ ಪ್ರಶ್ನಿಸುವ ಅಧಿಕಾರವನ್ನೂ ಕಳೆದುಕೊಂಡುಬಿಟ್ಟಿದ್ದೇವೆ. ಉಳಿದಿರುವುದು ಒಂದೇ ದಾರಿ: 'ಉತ್ತರ ಉತ್ತರ... ಜೈ ಜೈ ಉತ್ತರ' ಎಂದು ಉತ್ತರದ ಅಪೇಕ್ಷೆ ಇಲ್ಲದೇ ಉತ್ತರ ಭಾರತದ ಮಹಾಮಹಿಮರನ್ನು ಮನಸೊಳಗೆ ಬಿಟ್ಟುಕೊಳ್ಳುವುದು. ■